# ಸೇನಾ ಮತ್ತು ವಾಯುಸೇನಾ (ಖಾಸಗಿ ಸ್ವತ್ತಿನ ವಿಲೆ) ಅಧಿನಿಯಮ, 1950

**16.11.2006ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 35.ನೇ ಸಂಪುಟದ 1ನೇ ಸಂಚಿಕೆಯಲ್ಲಿ 143 ರಿಂದ 149ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ.**

## ವಿಷಯಾನುಕ್ರಮಣಿಕೆ

**ಪ್ರಕರಣಗಳು:**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಅಧಿಕಾರಿಗಳನ್ನು ಹೊರತುಪಡಿಸಿ, ಮೃತವ್ಯಕ್ತಿಗಳ ಮತ್ತು ಸೇವೆಯನ್ನು ತ್ಯಜಿಸಿ ಹೋಗುವವರ ಸ್ವತ್ತು
4. ಮರಣಹೊಂದುವ ಅಥವಾ ಸೇನೆಯನ್ನು ತ್ಯಜಿಸಿಹೋಗುವ ಅಧಿಕಾರಿಗಳ ಸ್ವತ್ತು
5. ಶಿಬಿರದಲ್ಲಿಯ ಅಥವಾ ಕ್ವಾರ್ಟರ್ಸ್‌ನಲ್ಲಿನ ರೆಜಿಮೆಂಟಿನ ಮತ್ತು ಇತರ ಋಣಗಳಿಗೆ ಸಂಬಂಧಪಟ್ಟ ಪ್ರಶ್ನೆಗಳ ತೀರ್ಮಾನ
6. ಕಮಾಂಡಿಂಗ್ ಅಧಿಕಾರಿಯ ಅಥವಾ ಸಮಿತಿಯ ಪ್ರಾತಿನಿಧಿಕ ಅಧಿಕಾರಗಳು
7. ಮೃತ ವ್ಯಕ್ತಿಯ ಎಸ್ಟೇಟನ್ನು ಪ್ರಧಾನ ಆಡಳಿತಗಾರನಿಗೆ ವಹಿಸಿಕೊಡಲು ಕೇಂದ್ರಸರ್ಕಾರದ ಅಧಿಕಾರ
8. ನಿಯಮಿಸಲಾದ ವ್ಯಕ್ತಿಗಳಿಂದ ಹೆಚ್ಚುವರಿ ಹಣದ ವಿಲೆ
9. ಹಣವಲ್ಲದ ಇತರ ಸಾಮಾನು ಸರಂಜಾಮುಗಳ ವಿಲೆ
10. ಪ್ರೊಬೇಟ್ ಮುಂತಾದವನ್ನು ಹಾಜರುಪಡಿಸದೆ ಕೆಲವು ಸ್ವತ್ತಿನ ವಿಲೆ
11. ಕಮಾಂಡಿಂಗ್ ಅಧಿಕಾರಿ, ಸಮಿತಿ, ನಿಯಮಿಸಲಾದ ವ್ಯಕ್ತಿ ಮತ್ತು ಕೇಂದ್ರ ಸರ್ಕಾರ – ಇವರನ್ನು ವಿಮುಕ್ತಗೊಳಿಸುವುದು
12. ಕಮಾಂಡಿಂಗ್ ಅಧಿಕಾರಿ, ಸಮಿತಿ ಅಥವಾ ನಿಯಮಿಸಲಾದ ವ್ಯಕ್ತಿಯ ವಶದಲ್ಲಿನ ಆಸ್ತಿಯು ಆ ಕಮಾಂಡಿಂಗ್ ಅಧಿಕಾರಿಯ, ಸಮಿತಿಯ ಅಥವಾ ನಿಯಮಿಸಲಾದ ವ್ಯಕ್ತಿಯು ಇರುವ ಸ್ಥಳದಲ್ಲಿನ ಆಸ್ತಿಯಾಗದಿರುವುದು
13. ಪ್ರತಿನಿಧಿಯ ಹಕ್ಕುಗಳನ್ನು ಉಳಿಸುವುದು
14. ಅಸ್ವಸ್ಥಚಿತ್ತ ವ್ಯಕ್ತಿಗಳಿಗೆ ಅಥವಾ ಸೇನೆಯ ಸಕ್ರಿಯ ಸೇವೆಯಲ್ಲಿರುವಾಗಲೇ ಕಾಣೆಯಾದವರೆಂದು ವರದಿಯಾದ ವ್ಯಕ್ತಿಗಳಿಗೆ 3 ರಿಂದ 13 ರವರೆಗಿನ ಪ್ರಕರಣಗಳ ಅನ್ವಯ
15. ಕೆಲವು ನಿರ್ದಿಷ್ಟ ಪ್ರಕರಣಗಳಲ್ಲಿ ಹೊಂದಾಣಿಕೆ ಸ್ಥಾಯಿ ಸಮಿತಿಯ ನೇಮಕ
16. ನಿಯಮ ರಚನಾಧಿಕಾರ

# ಸೇನಾ ಮತ್ತು ವಾಯುಸೇನಾ (ಖಾಸಗಿ ಸ್ವತ್ತಿನ ವಿಲೆ) ಅಧಿನಿಯಮ, 1950

(1950ರ ಅಧಿನಿಯಮ ಸಂಖ್ಯೆ 40)

[28ನೇ ಏಪ್ರಿಲ್ 1950]

ಮರಣ ಹೊಂದುವ ಅಥವಾ ಹುದ್ದೆಯನ್ನು ತ್ಯಜಿಸುವ ಅಥವಾ ಅಸ್ವಸ್ಥಚಿತ್ತರಾದವರೆಂದು ಖಚಿತಪಡಿಸಿಕೊಂಡಿರುವ ಅಥವಾ ಸಕ್ರಿಯ ಸೇವೆಯಲ್ಲಿರುವಾಗ ಕಾಣೆಯಾಗಿರುವರೆಂದು ಅಧಿಕೃತವಾಗಿ ವರದಿಯಾಗಿರುವ ವ್ಯಕ್ತಿಗಳ ಖಾಸಗಿ ಸ್ವತ್ತನ್ನು ಸೇನಾ ಅಧಿನಿಯಮ, 1950ಕ್ಕೆ (1950ರ 46) ಅಥವಾ ವಾಯು ಸೇನಾ ಅಧಿನಿಯಮ, 1950ಕ್ಕೆ (1950ರ 45) ಒಳಪಟ್ಟು ವಿಲೆ ಮಾಡಲು ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.-

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಸೇನಾ ಮತ್ತು ವಾಯುಸೇನಾ (ಖಾಸಗಿ ಸ್ವತ್ತಿನ ವಿಲೆ) ಅಧಿನಿಯಮ, 1950 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು ಮತ್ತು ಭಾರತದ ನಾಗರೀಕರಿಗೆ ಮತ್ತು ಸೇನಾ ಅಧಿನಿಯಮ, 1950 (1950ರ 46) ಅಥವಾ ವಾಯು ಸೇನಾ ಅಧಿನಿಯಮ, 1950ಕ್ಕೆ (1950ರ 45) ಒಳಪಟ್ಟ ವ್ಯಕ್ತಿಗಳಿಗೆ, ಅವರು ಎಲ್ಲಿಯೇ ಇರಲಿ ಅನ್ವಯವಾಗತಕ್ಕದ್ದು.

(3) ಇದು ಕೇಂದ್ರ ಸರ್ಕಾರವು, ಈ ಬಗ್ಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

(1) "ಸಮಿತಿ" ಎಂದರೆ 4ನೇ ಪ್ರಕರಣದ ಮೇರೆಗೆ ರಚಿತವಾದ ಹೊಂದಾಣಿಕೆ ಸಮಿತಿ;

(2) "ನಿಯಮಿಸಲಾದುದು" ಎಂದರೆ ಅಧಿನಿಯಮದ ಮೇರೆಗೆ ನಿಯಮಗಳ ಮೂಲಕ ನಿಯಮಿಸಲಾದುದು;

(3) "ಶಿಬಿರದಲ್ಲಿನ ಅಥವಾ ಕ್ವಾರ್ಟರ್ಸ್‌ನಲ್ಲಿನ ರೆಜಿಮೆಂಟಿನ ಮತ್ತು ಇತರ ಋಣಗಳು" ಎಂಬುದರಲ್ಲಿ ಈ ಮುಂದಿನವುಗಳು ಒಳಗೊಳ್ಳುತ್ತವೆ,-

(i) ಸೇನಾ ಅಧಿನಿಯಮ, 1950ಕ್ಕೆ (1950ರ 46) ಒಳಪಟ್ಟಿರುವ ಯಾರೇ ವ್ಯಕ್ತಿಯ ಸಂಬಂಧದಲ್ಲಿ ಮಿಲಿಟರಿ ಋಣಗಳಾಗಿ ಬಾಕಿ ಇರುವ ಹಣ, ಎಂದರೆ:-

(ಎ) ಕ್ವಾರ್ಟರ್ಸ್‌ಗಳು;

(ಬಿ) ಮೆಸ್, ಬ್ಯಾಂಡ್ ಮತ್ತು ರೆಜಿಮೆಂಟಿನ ಇತರ ಲೆಕ್ಕಗಳು;

(ಸಿ) ಮೃತನ ಮೂರು ತಿಂಗಳ ವೇತನಕ್ಕೆ ಸಮನಾದ ಮೊತ್ತಕ್ಕೆ ಮೀರದಷ್ಟು ಮಿಲಿಟರಿ ಉಡುಪು, ಸೈನಿಕ ಸಾಮಗ್ರಿಗಳು ಮತ್ತು ಸಾಧನ ಸಲಕರಣೆಗಳು ಮತ್ತು ಅವನ ಮರಣದ ದಿನಾಂಕಕ್ಕೆ ಮುಂಚೆ ಹದಿನೆಂಟು ತಿಂಗಳ ಒಳಗೆ ಬಾಕಿಯಾಗಿ ಉಳಿದಿರುವ ಮುಂಗಡದ ಸಂಬಂಧದಲ್ಲಿ

– ಉಳಿದಿರುವ ಅಥವಾ ಯಾವುದೇ ಮುಂಗಡದ ಬಾಕಿ ಮೊತ್ತ; ಮತ್ತು

(ii) ವಾಯು ಸೇನಾ ಅಧಿನಿಯಮ, 1950ಕ್ಕೆ (1950ರ 45) ಒಳಪಟ್ಟ ಯಾರೇ ವ್ಯಕ್ತಿಯ ಸಂಬಂಧದಲ್ಲಿ, ವಾಯು ಸೇನಾ ಋಣಗಳಾಗಿ ಬಾಕಿ ಇರುವ ಹಣ, ಎಂದರೆ:-

(ಎ) ಕ್ವಾರ್ಟರ್ಸ್‌ಗಳು;

(ಬಿ) ಮೆಸ್, ಬ್ಯಾಂಡ್ ಮತ್ತು ಇತರ ಸೇವಾ ಲೆಕ್ಕಗಳು;

(ಸಿ) ಮೃತನ ಮೂರು ತಿಂಗಳ ವೇತನಕ್ಕೆ ಸಮನಾದ ಮೊತ್ತಕ್ಕೆ ಮೀರದಷ್ಟು ವಾಯುಸೇನಾ ಉಡುಪು, ಸೈನಿಕ ಸಾಮಗ್ರಿಗಳು ಮತ್ತು ಸಾಧನ ಸಲಕರಣೆಗಳು ಮತ್ತು ಅವನ ಮರಣದ

ದಿನಾಂಕಕ್ಕೆ ಮುಂಚೆ ಹದಿನೆಂಟು ತಿಂಗಳ ಒಳಗೆ ಬಾಕಿಯಾಗಿ ಉಳಿದಿರುವ ಹಣದ ಸಂಬಂಧದಲ್ಲಿ

– ಉಳಿದಿರುವ ಅಥವಾ ಯಾವುದೇ ಮುಂಗಡದ ಬಾಕಿ ಮೊತ್ತ;

(4) "ಪ್ರಾತಿನಿಧ್ಯ ಪತ್ರ" ಎಂಬುದರಲ್ಲಿ ಪ್ರೊಬೇಟು, ಲಗತ್ತಿಸಿದ ಉಯಿಲಿರುವ, ಅಥವಾ ಅದು ಇಲ್ಲದಿರುವ ಆಡಳಿತ ಪತ್ರಗಳು ಮತ್ತು ಮೃತ ವ್ಯಕ್ತಿಯ ಎಸ್ಟೇಟಿನ ನಿರ್ವಾಹಕನನ್ನಾಗಿಸುವ ಅಥವಾ ಅಡಳಿತಗಾರನನ್ನಾಗಿಸುವ ಅಥವಾ ಮೃತ ವ್ಯಕ್ತಿಯ ಆಸ್ತಿಗಳನ್ನು ಸ್ವೀಕರಿಸಲು ಅಥವಾ ವಸೂಲು ಮಾಡಲು ಅಧಿಕಾರ ನೀಡುವ ಉತ್ತರಾಧಿಕಾರ ಪ್ರಮಾಣ ಪತ್ರವು ಒಳಗೊಳ್ಳುತ್ತದೆ.

(5) "ಪ್ರತಿನಿಧಿ" ಎಂದರೆ ಪ್ರಾತಿನಿಧ್ಯ ಪತ್ರವನ್ನು ಪಡೆದ ಯಾರೇ ವ್ಯಕ್ತಿ; ಆದರೆ ಇದರಲ್ಲಿ ಪ್ರಧಾನ ಆಡಳಿತಗಾರನು ಸೇರುವುದಿಲ್ಲ.

(6) ಇದರಲ್ಲಿ ಬಳಸಿರುವ ಮತ್ತು ಸೇನಾ ಅಧಿನಿಯಮ, 1950ರಲ್ಲಿ (1950ರ 46) ಅಥವಾ ವಾಯು ಸೇನಾ ಅಧಿನಿಯಮ, 1950ರಲ್ಲಿ (1950ರ 45) ಪರಿಭಾಷಿಸಿರುವ ಆದರೆ, ಈ ಅಧಿನಿಯಮದಲ್ಲಿ ಪರಿಭಾಷಿಸಿರದ ಎಲ್ಲಾ ಪದಗಳು ಮತ್ತು ಪದಾವಳಿಗಳು ಅನುಕ್ರಮವಾಗಿ ಆ ಅಧಿನಿಯಮಗಳ ಮೂಲಕ ಅವುಗಳಿಗೆ ಕೊಟ್ಟಿರುವ ಅರ್ಥಗಳನ್ನೇ ಹೊಂದಿರುವುದಾಗಿ ಭಾವಿಸತಕ್ಕದ್ದು.

**3. ಅಧಿಕಾರಿಗಳನ್ನು ಹೊರತುಪಡಿಸಿ, ಮೃತ ವ್ಯಕ್ತಿಗಳ ಮತ್ತು ಸೇವೆಯನ್ನು ತ್ಯಜಿಸಿ ಹೋಗುವವರ ಸ್ವತ್ತು.**– (1) ಸಂದರ್ಭಾನುಸಾರ ಸೇನಾ ಅಧಿನಿಯಮ, 1950 (1950ರ 46) ಅಥವಾ ವಾಯು ಸೇನಾ ಅಧಿನಿಯಮ, 1950ಕ್ಕೆ (1950ರ 45) ಒಳಪಟ್ಟಿರುವ ಆದರೆ ಒಬ್ಬ ಅಧಿಕಾರಿಯಾಗಿರದ ಯಾರೇ ವ್ಯಕ್ತಿಯ ಮರಣದ ತರುವಾಯ ಅಥವಾ ಅವನು ಸೇವೆಯನ್ನು ತ್ಯಜಿಸಿಹೋದ ಮೇಲೆ, ಮೃತನು ಅಥವಾ ಸೇವೆಯನ್ನು ತ್ಯಜಿಸಿಹೋದ ವ್ಯಕ್ತಿಯು ಯಾವ ದಳಕ್ಕೆ, ಇಲಾಖೆಗೆ, ಸೇನಾ ತುಕಡಿಗೆ ಅಥವಾ ಘಟಕಕ್ಕೆ ಸೇರಿರುವನೋ ಅದರ ಕಮಾಂಡಿಂಗ್ ಅಧಿಕಾರಿಯು, ಸಾಧ್ಯವಾದಷ್ಟು ಬೇಗನೆ ಮತ್ತು ಈ ಸಂಬಂಧದಲ್ಲಿ ರಚಿಸಬಹುದಾದ ಯಾವುವೇ ನಿಯಮಗಳಿಗೆ ಒಳಪಟ್ಟು,–

(ಎ) ಶಿಬಿರದಲ್ಲಿ ಅಥವಾ ಕ್ವಾರ್ಟರ್ಸ್‌ನಲ್ಲಿ ಮೃತನಾದವನಿಗೆ ಅಥವಾ ಸೇವೆಯನ್ನು ತ್ಯಜಿಸಿ ಹೋದವನಿಗೆ ಸೇರಿರುವ ಎಲ್ಲಾ ಚರಸ್ವತ್ತನ್ನು ತನ್ನ ವಶಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ಅದರ ಒಂದು ಪಟ್ಟಿಯನ್ನು ತಯಾರಿಸುವಂತೆ ಮಾಡತಕ್ಕದ್ದು;

(ಬಿ) ಅಂಥ ವ್ಯಕ್ತಿಗೆ ಬಾಕಿ ಇರುವ ವೇತನ ಮತ್ತು ಭತ್ಯೆಗಳನ್ನು ಡ್ರಾ ಮಾಡತಕ್ಕದ್ದು;

(ಸಿ) ಅಂಥ ವ್ಯಕ್ತಿಗಳಿಗೆ ಸಂಬಂಧಪಟ್ಟಂತೆ, ಶಿಬಿರದಲ್ಲಿಯ ಅಥವಾ ಕ್ವಾರ್ಟರ್ಸ್‌ಗಳಲ್ಲಿನ ರೆಜಿಮೆಂಟಿನ ಮತ್ತು ಇತರ ಋಣಗಳು ಯಾವುವಾದರೂ ಇದ್ದಲ್ಲಿ ಅವುಗಳ ಸಂದಾಯಕ್ಕೆ ಯುಕ್ತ ವ್ಯವಸ್ಥೆ ಮಾಡತಕ್ಕದ್ದು.

(2) ಮೃತ ವ್ಯಕ್ತಿಯ ಸಂದರ್ಭದಲ್ಲಿ, ಕಮಾಂಡಿಂಗ್ ಅಧಿಕಾರಿಯು,–

(ಎ) ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ಅನ್ಯಥಾ ಉಪಬಂಧಿಸಿರದ ಯಾವುದೇ ಸಂದರ್ಭದಲ್ಲಿ, ಶಿಬಿರದಲ್ಲಿಯ ಅಥವಾ ಕ್ವಾರ್ಟರ್ಸ್‌ನಲ್ಲಿನ ರೆಜಿಮೆಂಟಿನ ಮತ್ತು ಇತರ ಋಣಗಳು, ಮೃತನ ಅಂತ್ಯಕ್ರಿಯೆಯ ವೆಚ್ಚಗಳು ಮತ್ತು ಮೃತನ ಎಸ್ಟೇಟಿನ ಸಂಬಂಧದಲ್ಲಿ ತಾನು ಭರಿಸಿರುವ ಯಾವುವೇ ವೆಚ್ಚಗಳು ಇದ್ದಲ್ಲಿ ಅವುಗಳ ಸಂದಾಯಕ್ಕೆ ವ್ಯವಸ್ಥೆ ಮಾಡುವುದು ಅವಶ್ಯಕವೆಂದು ಅಭಿಪ್ರಾಯಪಟ್ಟರೆ ಹಾಗೆ ಮಾಡತಕ್ಕದ್ದು ; ಮತ್ತು

(ಬಿ) ಯಾವುದೇ ಇತರೆ ಸಂದರ್ಭದಲ್ಲಿ,–

ಮೃತನು ಯಾವುದೇ ಬ್ಯಾಂಕಿಂಗ್ ಕಂಪನಿಯಲ್ಲಿ (ಅಂಚೆ ಕಚೇರಿಯ ಉಳಿತಾಯ ಖಾತೆ, ಸಹಕಾರಿ ಬ್ಯಾಂಕ್ ಅಥವಾ ಸೊಸೈಟಿ ಅಥವಾ ಹಣದ ರೂಪದ ಠೇವಣಿಗಳನ್ನು ಸ್ವೀಕರಿಸುವ ಯಾವುದೇ ಹೆಸರಿನ ಯಾವುದೇ ಇತರ ಸಂಸ್ಥೆಯು ಸೇರಿದಂತೆ) ಇಟ್ಟಿದ್ದ ಎಲ್ಲಾ ಹಣವನ್ನು ಸಂಗ್ರಹಿಸಬಹುದು ಮತ್ತು ಆ ಉದ್ದೇಶಕ್ಕಾಗಿ ಅಂಥ ಬ್ಯಾಂಕಿಂಗ್ ಕಂಪನಿ, ಸೊಸೈಟಿ ಅಥವಾ ಇತರ ಸಂಸ್ಥೆಯ ನಿಯಮಗಳಲ್ಲಿ ಏನೇ ಇದ್ದರೂ, ಅಂತಹ

ಬ್ಯಾಂಕಿಂಗ್ ಕಂಪನಿಯ, ಸೊಸೈಟಿಯ ಅಥವಾ ಇತರ ಸಂಸ್ಥೆಯ ಏಜೆಂಟನು ಅಥವಾ ಮ್ಯಾನೇಜರ್ ಅಥವಾ ಇತರ ಸೂಕ್ತ ಅಧಿಕಾರಿಯು ಆ ಹಣವನ್ನು ಕೂಡಲೇ ತನಗೆ ಸಂದಾಯ ಮಾಡುವಂತೆ ಅವನನ್ನು ಅಗತ್ಯಪಡಿಸಬಹುದು ಮತ್ತು ಅಂತಹ ಏಜೆಂಟ್, ಮ್ಯಾನೇಜರ್ ಅಥವಾ ಇತರ ಅಧಿಕಾರಿಯು ಆ ಕೋರಿಕೆಯನ್ನು ಪಾಲಿಸಲು ಬದ್ಧನಾಗಿರತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ಮಾಡಿರುವ ಕೋರಿಕೆಯನ್ನು ಪಾಲಿಸಿ ಒಂದು ಬ್ಯಾಂಕಿಂಗ್ ಕಂಪನಿ, ಸೊಸೈಟಿ ಅಥವಾ ಇತರ ಸಂಸ್ಥೆಯು ಯಾವುದೇ ಹಣವನ್ನು ಸಂದಾಯ ಮಾಡಿರುವಲ್ಲಿ ಅಂತಹ ಹಣದ ಸಂಬಂಧದಲ್ಲಿ ಯಾರೇ ವ್ಯಕ್ತಿಗೆ, ಬ್ಯಾಂಕಿಂಗ್ ಕಂಪನಿ, ಸೊಸೈಟಿ ಅಥವಾ ಇತರ ಸಂಸ್ಥೆಯ ವಿರುದ್ಧ ಯಾವುದೇ ಕ್ಲೇಮು ಇರತಕ್ಕದ್ದಲ್ಲ.

(4) ಶಿಬಿರದಲ್ಲಿಯ ಅಥವಾ ಕ್ವಾರ್ಟರ್ಸ್‌ನಲ್ಲಿನ ರೆಜಿಮೆಂಟಿನ ಮತ್ತು ಇತರ ಋಣಗಳು ಯಾವುವೇ ಇದ್ದಲ್ಲಿ ಅವುಗಳ ಮತ್ತು ಮೃತನ ಅಂತ್ಯ ಸಂಸ್ಕಾರ ವೆಚ್ಚಕ್ಕಾಗಿ ಯಾವುದೇ ಹಣದ ವ್ಯವಸ್ಥೆಯನ್ನು ಅನ್ಯಥಾ ಮಾಡದಿದ್ದಲ್ಲಿ ಅಂಥ ವೆಚ್ಚಗಳ ಹಾಗೂ ಮೃತನ ಎಸ್ಟೇಟಿನ ಸಂಬಂಧದಲ್ಲಿ ಕಮಾಂಡಿಂಗ್ ಅಧಿಕಾರಿಯು ವಹಿಸಿರುವ ಯಾವುದೇ ವೆಚ್ಚಗಳ ಸಂದಾಯಕ್ಕಾಗಿ ಮೃತನ ಪ್ರತಿನಿಧಿಯು, ಕಮಾಂಡಿಂಗ್ ಅಧಿಕಾರಿಗೆ ಸಮಾಧಾನವಾಗುವಂತೆ ಭದ್ರತೆಯನ್ನು ನೀಡಿರುವಲ್ಲಿ, ಕಮಾಂಡಿಂಗ್ ಅಧಿಕಾರಿಯು (1)ನೇ ಮತ್ತು (2)ನೇ ಉಪ ಪ್ರಕರಣಗಳ ಮೇರೆಗೆ ತಾನು ಸ್ವೀಕರಿಸಿದ ಸ್ವತ್ತನ್ನು ಆ ಪ್ರತಿನಿಧಿಯ ವಶಕ್ಕೆ ಕೊಡತಕ್ಕದ್ದು, ಆ ತರುವಾಯ ಮೃತನ ಎಸ್ಟೇಟಿನ ಆಡಳಿತದ ಸಂಬಂಧದಲ್ಲಿ ಅವನ ಜವಾಬ್ದಾರಿಯು ಕೊನೆಗೊಳ್ಳತಕ್ಕದ್ದು.

(5) ಯಾವ ಮೃತನ ಎಸ್ಟೇಟಿನ ಬಗ್ಗೆ (4) ನೇ ಉಪ ಪ್ರಕರಣದ ಮೇರೆಗೆ ಅಥವಾ 10ನೇ ಪ್ರಕರಣದ ಮೇರೆಗೆ ವ್ಯವಹರಿಸಿಲ್ಲವೋ ಆ ಮೃತನ ಸಂದರ್ಭದಲ್ಲಿ ಮತ್ತು ಸೇವೆಯನ್ನು ತ್ಯಜಿಸಿಹೋದ ವ್ಯಕ್ತಿಯ ಸಂದರ್ಭದಲ್ಲಿ ಕಮಾಂಡಿಂಗ್ ಅಧಿಕಾರಿಯು,-

(i) ಮೃತನ ಅಥವಾ ಸೇವೆಯನ್ನು ತ್ಯಜಿಸಿಹೋದವನ ಶಿಬಿರದಲ್ಲಿಯ ಅಥವಾ ಕ್ವಾರ್ಟರ್ಸ್‌ನಲ್ಲಿನ ರೆಜಿಮೆಂಟಿನ ಮತ್ತು ಇತರ ಋಣಗಳು, ಮೃತನ ಅಂತ್ಯ ಸಂಸ್ಕಾರ ವೆಚ್ಚಗಳು, ಯಾವುವಾದರೂ ಇದ್ದರೆ, ಅವು ಮತ್ತು ಕಮಾಂಡಿಂಗ್ ಅಧಿಕಾರಿಯು ಮೃತನ ಅಥವಾ ಸೇವೆಯನ್ನು ತ್ಯಜಿಸಿ ಹೋದವನ ಎಸ್ಟೇಟಿನ ಸಂಬಂಧದಲ್ಲಿ ವಹಿಸಿದ ವೆಚ್ಚಗಳು ಯಾವುವಾದರೂ ಇದ್ದರೆ ಅವು - ಇವುಗಳ ಸಂದಾಯವನ್ನು ಪಡೆಯುವ ಉದ್ದೇಶಕ್ಕಾಗಿ ಯಾವುದೇ ಸಂದರ್ಭದಲ್ಲಿ, ಸಂದರ್ಭಾನುಸಾರ ಮೃತನ ಅಥವಾ ಸೇವೆಯನ್ನು ತ್ಯಜಿಸಿ ಹೋದವನ ಚರಸ್ವತ್ತನ್ನು ಮಾರಾಟ ಮಾಡುವುದು ಅಥವಾ ಅದನ್ನು ಹಣದ ರೂಪದಲ್ಲಿ ಪರಿವರ್ತಿಸುವುದು ಅವಶ್ಯವೆಂದು ಅಭಿಪ್ರಾಯಪಟ್ಟರೆ, ಅವನು ಹಾಗೆ ಮಾಡಿಸತಕ್ಕದ್ದು ; ಮತ್ತು

(ii) ಇತರೆ ಯಾವುದೇ ಸಂದರ್ಭದಲ್ಲಿ, ಸಂದರ್ಭಾನುಸಾರ ಮೃತನ ಅಥವಾ ಸೇವೆಯನ್ನು ತ್ಯಜಿಸಿಹೋದವನ ಚರಸ್ವತ್ತನ್ನು ಮಾರಾಟ ಮಾಡುವುದು ಅಥವಾ ಅದನ್ನೇ ಹಣದ ರೂಪದಲ್ಲಿ ಪರಿವರ್ತಿಸುವುದು ಅವಶ್ಯವೆಂದು ಅಭಿಪ್ರಾಯಪಟ್ಟರೆ, ಅವನು ಹಾಗೆ ಮಾಡಿಸಬಹುದು .

(6) ಸಂದರ್ಭಾನುಸಾರ ಮೃತನ ಅಥವಾ ಸೇವೆಯನ್ನು ತ್ಯಜಿಸಿಹೋದವನ ಶಿಬಿರದಲ್ಲಿಯ ಅಥವಾ ಕ್ವಾರ್ಟರ್ಸ್‌ನಲ್ಲಿನ ರೆಜಿಮೆಂಟಿನ ಮತ್ತು ಇತರ ಋಣಗಳು ಯಾವುವಾದರೂ ಇದ್ದರೆ ಅವುಗಳನ್ನು, ಮೃತನ ಅಥವಾ ಸೇವೆಯನ್ನು ತ್ಯಜಿಸಿ ಹೋದವನ ಎಸ್ಟೇಟಿನ ಸಂಬಂಧದಲ್ಲಿ ಕಮಾಂಡಿಂಗ್ ಅಧಿಕಾರಿಯು ವಹಿಸಿದ ಯಾವುದೇ ವೆಚ್ಚಗಳನ್ನು ಮತ್ತು ಮೃತನ ಸಂದರ್ಭದಲ್ಲಿ ಅಂತ್ಯಕ್ರಿಯೆಯ ವೆಚ್ಚಗಳಿಗಾಗಿ ಅನ್ಯಥಾ ಯಾವುದೇ ಹಣದ ಏರ್ಪಾಟು ಮಾಡಿರದಿದ್ದ ಸಂದರ್ಭಗಳಲ್ಲಿ ಅಂಥ ವೆಚ್ಚಗಳನ್ನು (1), (2) ಮತ್ತು (5)ನೇ ಉಪ ಪ್ರಕರಣಗಳ ಮೇರೆಗೆ ತಾನು ಸ್ವೀಕರಿಸಿದ, ಸಂಗ್ರಹಿಸಿದ ಅಥವಾ ವಸೂಲಿ ಮಾಡಿದ ಹಣದಿಂದ ಸಂದಾಯ ಮಾಡತಕ್ಕದ್ದು.

(7) (6)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಋಣಗಳು ಮತ್ತು ವೆಚ್ಚಗಳನ್ನು ಸಂದಾಯ ಮಾಡಿದ ತರುವಾಯ ಯಾವುದೇ ಹೆಚ್ಚುವರಿ ಹಣ ಉಳಿದಿದ್ದರೆ, ಅದನ್ನು,-

(ಎ) ಮೃತನ ಸಂದರ್ಭದಲ್ಲಿ, ಅವನ ಪ್ರತಿನಿಧಿ ಯಾರಾದರೂ ಇದ್ದರೆ ಅವನಿಗೆ ಅಥವಾ ಮರಣದ ತರುವಾಯ ಹನ್ನೆರಡು ತಿಂಗಳ ಒಳಗಾಗಿ ಅಂತಹ ಉಳಿದಿರುವ ಹೆಚ್ಚುವರಿ ಹಣಕ್ಕೆ ಯಾವುದೇ ಕ್ಲೇಮನ್ನು ಸ್ಥಾಪಿಸದಿರುವ ಸಂದರ್ಭದಲ್ಲಿ ನಿಯಮಿಸಲಾದ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು; ಮತ್ತು

(ಬಿ) ಸೇನೆಯನ್ನು ತ್ಯಜಿಸಿಹೋದವನ ಸಂದರ್ಭದಲ್ಲಿ, ನಿಯಮಿಸಲಾದ ವ್ಯಕ್ತಿಗೆ ಅದನ್ನು ಆ ಕೂಡಲೇ ಸಂದಾಯಮಾಡತಕ್ಕದ್ದು, ಮತ್ತು ಸೇನೆಯನ್ನು ತ್ಯಜಿಸಿಹೋದ ದಿನಾಂಕದಿಂದ ಮೂರು ವರ್ಷಗಳು ಮುಕ್ತಾಯವಾದ ತರುವಾಯ ಸೇನೆಯನ್ನು ತ್ಯಜಿಸಿಹೋದವನು ಆ ಮಧ್ಯೆ ಶರಣಾಗತನಾಗಿದ್ದ ಹೊರತು ಅಥವಾ ಅವನನ್ನು ಬಂಧಿಸಲಾಗಿದ್ದ ಹೊರತು, ಅದನ್ನು ಕೇಂದ್ರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು:

ಪರಂತು, ಸೇನೆಯನ್ನು ತ್ಯಜಿಸಿಹೋದವನು ಈ ಮಧ್ಯೆ ಶರಣಾಗತನಾಗಿರದಿದ್ದರೆ ಅಥವಾ ಅವನನ್ನು ಬಂಧಿಸಿರದಿದ್ದರೆ ನಿಯಮಿಸಲಾದ ವ್ಯಕ್ತಿಯು (ಬಿ) ಖಂಡದ ಮೇರೆಗೆ ತಾನು ಸ್ವೀಕರಿಸಿದ ಹಣದ ಪೈಕಿ ಹೆಚ್ಚುವರಿಯಾಗಿ ಉಳಿದ ಪೂರ್ತಿ ಹಣವನ್ನು ಅಥವಾ ಅದರ ಯಾವುದೇ ಭಾಗವನ್ನು, ಸದರಿ ಮೂರು ವರ್ಷಗಳ ಅವಧಿಯಲ್ಲಿ ಯಾವುದೇ ಸಮಯದಲ್ಲಿ, ಸೇನೆಯನ್ನು ತ್ಯಜಿಸಿಹೋದವನ ಪತ್ನಿಗೆ ಅಥವಾ ಮಕ್ಕಳಿಗೆ ಅಥವಾ ಅವನ ಯಾರೇ ಇತರ ಅವಲಂಬಿತನಿಗೆ ಸಂದಾಯ ಮಾಡಬಹುದು.

**ವಿವರಣೆ.–** ಈ ಪ್ರಕರಣದಲ್ಲಿ ಮತ್ತು 4ನೇ ಪ್ರಕರಣದಲ್ಲಿ ವಾಯು ಸೇನಾ ಅಧಿನಿಯಮ, 1950ಕ್ಕೆ (1950ರ 45) ಒಳಪಟ್ಟ ವ್ಯಕ್ತಿಗಳಿಗೆ ಸಂಬಂಧಿಸಿದಂತೆ "ಅಧಿಕಾರಿ" ಎಂಬ ಪದದಲ್ಲಿ ಮರಣ ಹೊಂದಿದ ಅಥವಾ ಸೇನೆಯನ್ನು ತ್ಯಜಿಸಿ ಹೋದ ಒಬ್ಬ ವಾರಂಟ್ ಅಧಿಕಾರಿಯು ಸೇರುತ್ತಾನೆ.

**4. ಮರಣ ಹೊಂದುವ ಅಥವಾ ಸೇನೆಯನ್ನು ತ್ಯಜಿಸಿಹೋಗುವ ಅಧಿಕಾರಿಗಳ ಸ್ವತ್ತು.–** ಸೇನಾ ಅಧಿನಿಯಮ, 1950ಕ್ಕೆ (1950ರ 46) ಅಥವಾ ವಾಯು ಸೇನಾ ಅಧಿನಿಯಮ, 1950ಕ್ಕೆ (1950ರ 45) ಒಳಪಟ್ಟು, ಮರಣಹೊಂದುವ ಅಥವಾ ಸೇನೆಯನ್ನು ತ್ಯಜಿಸಿಹೋಗುವ ಯಾರೇ ಅಧಿಕಾರಿಯ ಸ್ವತ್ತಿನ ವಿಲೆಗೂ ಸಹ 3ನೇ ಪ್ರಕರಣದ ಉಪಬಂಧಗಳು ಈ ಮುಂದಿನ ಮಾರ್ಪಾಟುಗಳೊಂದಿಗೆ ಅನ್ವಯವಾಗತಕ್ಕದ್ದು, ಎಂದರೆ:–

(i) 3ನೇ ಪ್ರಕರಣದ ಮೇರೆಗೆ ಕಮಾಂಡಿಂಗ್ ಅಧಿಕಾರಿಯ ಪ್ರಕಾರ್ಯಗಳನ್ನು ಈ ಸಂಬಂಧದಲ್ಲಿ ರಚಿಸಲಾದ ಹೊಂದಾಣಿಕೆ ಸಮಿತಿಯು ನಿಯಮಿಸಲಾದ ರೀತಿಯಲ್ಲಿ ನೆರವೇರಿಸತಕ್ಕದ್ದು;

(ii) 3ನೇ ಪ್ರಕರಣದ (6)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಋಣಗಳು ಮತ್ತು ವೆಚ್ಚಗಳನ್ನು ಸಂದಾಯ ಮಾಡಿದ ತರುವಾಯ ಹೆಚ್ಚುವರಿ ಹಣ ಯಾವುದಾದರೂ ಉಳಿದಿದ್ದರೆ, ಅದನ್ನು ಮೃತ ಅಧಿಕಾರಿಯ ಸಂದರ್ಭದಲ್ಲಿ ನಿಯಮಿಸಲಾದ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು.

**5. ಶಿಬಿರದಲ್ಲಿಯ ಅಥವಾ ಕ್ವಾರ್ಟರ್ಸ್‌ನಲ್ಲಿನ ರೆಜಿಮೆಂಟಿನ ಮತ್ತು ಇತರ ಋಣಗಳಿಗೆ ಸಂಬಂಧಪಟ್ಟ ಪ್ರಶ್ನೆಗಳ ತೀರ್ಮಾನ.–** ಒಬ್ಬ ಮೃತನ ಅಥವಾ ಸೇನೆಯನ್ನು ತ್ಯಜಿಸಿಹೋದವನ ಸಂಬಂಧದಲ್ಲಿ ಶಿಬಿರದಲ್ಲಿಯ ಅಥವಾ ಕ್ವಾರ್ಟರ್ಸ್‌ನಲ್ಲಿನ ರೆಜಿಮೆಂಟಿನ ಮತ್ತು ಇತರ ಋಣಗಳು ಯಾವುವು ಎಂಬ ಬಗ್ಗೆ ಅಥವಾ ಅವುಗಳ ಸಂಬಂಧದಲ್ಲಿ ಸಂದಾಯಮಾಡತಕ್ಕ ಮೊಬಲಗಿನ ಬಗ್ಗೆ ಯಾವುದೇ ಸಂದರ್ಭದಲ್ಲಿ ಸಂದೇಹ ಅಥವಾ ಭಿನ್ನಾಭಿಪ್ರಾಯ ಉಂಟಾದಲ್ಲಿ, ನಿಯಮಿಸಲಾದ ವ್ಯಕ್ತಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಎಲ್ಲಾ ಉದ್ದೇಶಗಳಿಗಾಗಿ, ಎಲ್ಲಾ ವ್ಯಕ್ತಿಗಳು ಅದಕ್ಕೆ ಬದ್ಧರಾಗಿರತಕ್ಕದ್ದು.

**6. ಕಮಾಂಡಿಂಗ್ ಅಧಿಕಾರಿಯ ಅಥವಾ ಸಮಿತಿಯ ಪ್ರಾತಿನಿಧಿಕ ಅಧಿಕಾರಗಳು.–** 3ನೇ ಪ್ರಕರಣ ಅಥವಾ 4ನೇ ಪ್ರಕರಣದ ಮೇರೆಗೆ ಸಂದರ್ಭಾನುಸಾರ ಕಮಾಂಡಿಂಗ್ ಅಧಿಕಾರಿ ಅಥವಾ ಸಮಿತಿಯು ತನ್ನ ಅಥವಾ ಅದರ ಅಧಿಕಾರಗಳನ್ನು ಚಲಾಯಿಸುವ ಉದ್ದೇಶಕ್ಕಾಗಿ ಯಾರೇ ಇತರ ವ್ಯಕ್ತಿಗಳನ್ನು ಅಥವಾ ಯಾವುದೇ ಪ್ರಾಧಿಕಾರಗಳನ್ನು ಹೊರತುಪಡಿಸಿ, ಅವನಾಗಲಿ ಅಥವಾ ಸಮಿತಿಯಾಗಲಿ ಮೃತನ ಎಸ್ಟೇಟಿನ ಪ್ರಾತಿನಿಧ್ಯ ಪತ್ರವನ್ನು ತೆಗೆದುಕೊಂಡಿದ್ದರೆ ಹೇಗೋ ಹಾಗೆ, ಅಂತಹವೇ ಹಕ್ಕುಗಳನ್ನು ಮತ್ತು ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಸಂದರ್ಭಾನುಸಾರ, ಕಮಾಂಡಿಂಗ್ ಅಧಿಕಾರಿಯು ಅಥವಾ ಸಮಿತಿಯು ನೀಡಿರುವ ಯಾವುದೇ ರಸೀತಿಯು ತದನುಸಾರವಾಗಿ ಪರಿಣಾಮ ಹೊಂದಿರತಕ್ಕದ್ದು.

**7. ಮೃತ ವ್ಯಕ್ತಿಯ ಎಸ್ಟೇಟನ್ನು ಪ್ರಧಾನ ಆಡಳಿತಗಾರನಿಗೆ ವಹಿಸಿಕೊಡಲು ಕೇಂದ್ರ ಸರ್ಕಾರದ ಅಧಿಕಾರ.**- (1) ಪ್ರಧಾನ ಆಡಳಿತಗಾರ ಅಧಿನಿಯಮ, 1963 (1963ರ 45) ರಲ್ಲಿ ಏನೇ ಒಳಗೊಂಡಿದ್ದರೂ, ಪ್ರಧಾನ ಆಡಳಿತಗಾರನು, 3ನೇ ಪ್ರಕರಣದ ಅಥವಾ 4ನೇ ಪ್ರಕರಣದ ಉಪಬಂಧಗಳ ಮೇರೆಗೆ ವ್ಯವಹರಿಸಲಾಗಿರುವ, ಒಬ್ಬ ಮೃತನ ಯಾವುದೇ ಸ್ವತ್ತಿನ ಸಂಬಂಧದಲ್ಲಿ ಮಧ್ಯಪ್ರವೇಶಿಸಲು ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅದರ ಮೇರೆಗೆ ಅವನನ್ನು ಸ್ಪಷ್ಟವಾಗಿ ಅಗತ್ಯಪಡಿಸಿದ್ದ ಅಥವಾ ಅನುಮತಿಸಿದ್ದ ಹೊರತು, ಅವನು ಹಾಗೆ ಮಾಡತಕ್ಕದ್ದಲ್ಲ.

(2) ಕೇಂದ್ರ ಸರ್ಕಾರವು ಯಾವುದೇ ಸಮಯದಲ್ಲಿ ಮತ್ತು ತಾನು ಸೂಕ್ತವೆಂದು ಭಾವಿಸುವಂತಹ ಸಂದರ್ಭಗಳಲ್ಲಿ, ಒಬ್ಬ ಮೃತನ ಎಸ್ಟೇಟನ್ನು ಸಂದರ್ಭಾನುಸಾರ, ಕಮಾಂಡಿಂಗ್ ಅಧಿಕಾರಿಯು ಅಥವಾ ಸಮಿತಿಯು ರಾಜ್ಯದ ಪ್ರಧಾನ ಆಡಳಿತಗಾರನಿಗೆ ಆಡಳಿತ ನಿರ್ವಹಣೆಗಾಗಿ ವಹಿಸಿಕೊಡತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಆ ತರುವಾಯ ಸಂದರ್ಭಾನುಸಾರ ಕಮಾಂಡಿಂಗ್ ಅಧಿಕಾರಿ ಅಥವಾ ಸಮಿತಿಯು ಅಂಥ ಪ್ರಧಾನ ಆಡಳಿತಗಾರನಿಗೆ ಎಸ್ಟೇಟನ್ನು ಒಪ್ಪಿಸಿಕೊಡತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಪ್ರಧಾನ ಆಡಳಿತಗಾರನಿಗೆ ಯಾವುದೇ ಎಸ್ಟೇಟನ್ನು ವಹಿಸಿಕೊಟ್ಟಲ್ಲಿ, ಪ್ರಧಾನ ಆಡಳಿತಗಾರ, ಪ್ರಧಾನ ಆಡಳಿತಗಾರ ಅಧಿನಿಯಮ, 1963 (1963ರ 45)ರ ಉಪಬಂಧಗಳಿಗನುಸಾರವಾಗಿ ಅಥವಾ ಯಾವುದೇ ರಾಜ್ಯದಲ್ಲಿ ಆ ಅಧಿನಿಯಮವು ಜಾರಿಯಲ್ಲಿ ಇರದಿದ್ದರೆ ಆ ರಾಜ್ಯದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನಿನ ಮೇರೆಗೆ ಅಂತಹ ಎಸ್ಟೇಟ್‌ನ ಆಡಳಿತವನ್ನು ನಿರ್ವಹಿಸತಕ್ಕದ್ದು:

ಪರಂತು, ಮೃತನ ಶಿಬಿರದಲ್ಲಿಯ ಅಥವಾ ಕ್ವಾರ್ಟರ್ಸ್‌ನಲ್ಲಿನ ರೆಜಿಮೆಂಟಿನ ಅಥವಾ ಇತರ ಋಣಗಳು ಯಾವುವಾದರೂ ಇದ್ದಲ್ಲಿ ಅವುಗಳನ್ನು ಪ್ರಧಾನ ಆಡಳಿತಗಾರನು ಆದ್ಯತೆಯ ಮೇರೆಗೆ ಮೃತನಿಂದ ಬಾಕಿ ಇರುವ ಯಾವುದೇ ಇತರ ಋಣಗಳಿಗಿಂತ ಮೊದಲು ಸಂದಾಯ ಮಾಡತಕ್ಕದ್ದು.

(4) ಪ್ರಧಾನ ಆಡಳಿತಗಾರನು ಎಲ್ಲಾ ಋಣಗಳನ್ನು ಮತ್ತು ಚಾರ್ಜುಗಳನ್ನು ತೀರಿಸಿದ ತರುವಾಯ ತನ್ನ ಬಳಿ ಹೆಚ್ಚುವರಿ ಹಣ ಯಾವುದಾದರೂ ಉಳಿದಿದ್ದರೆ ಅದನ್ನು ಮೃತನ ವಾರಸುದಾರರಿಗೆ ಸಂದಾಯ ಮಾಡತಕ್ಕದ್ದು ಮತ್ತು ಯಾರೇ ವಾರಸುದಾರರು ಪತ್ತೆಯಾಗದಿದ್ದಲ್ಲಿ ಅಂತಹ ಹೆಚ್ಚುವರಿ ಹಣವನ್ನು ನಿಯಮಿಸಲಾದ ವ್ಯಕ್ತಿಗೆ, ನಿಯಮಿಸಲಾದ ರೀತಿಯಲ್ಲಿ ಸಂದಾಯ ಮಾಡತಕ್ಕದ್ದು.

(5) ಪ್ರಧಾನ ಆಡಳಿತಗಾರನು ಈ ಪ್ರಕರಣದ ಮೇರೆಗಿನ ತನ್ನ ಕರ್ತವ್ಯಗಳ ಸಂಬಂಧದಲ್ಲಿ, ಶಿಬಿರದಲ್ಲಿಯ ಅಥವಾ ಕ್ವಾರ್ಟರ್ಸ್‌ನಲ್ಲಿನ ರೆಜಿಮೆಂಟಿನ ಮತ್ತು ಇತರ ಋಣಗಳನ್ನು ಸಂದಾಯ ಮಾಡಿದ ತರುವಾಯ, ತನಗೆ ಬರುವ ಅಥವಾ ತನ್ನಲ್ಲಿ ಉಳಿಯುವ ನಿವ್ವಳ ಮೊತ್ತದ ಶೇಕಡಾ ಮೂರಕ್ಕಿಂತ ಹೆಚ್ಚಿನ ಫೀಜನ್ನು ವಿಧಿಸತಕ್ಕದ್ದಲ್ಲ.

**8. ನಿಯಮಿಸಲಾದ ವ್ಯಕ್ತಿಗಳಿಂದ ಹೆಚ್ಚುವರಿ ಹಣದ ವಿಲೆ.**- 3ನೇ ಪ್ರಕರಣದ (7)ನೇ ಉಪ ಪ್ರಕರಣದಲ್ಲಿ ಅಥವಾ 4ನೇ ಪ್ರಕರಣದ (ii)ನೇ ಖಂಡದಲ್ಲಿ ಅಥವಾ 7ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಹೆಚ್ಚುವರಿ ಹಣವನ್ನು ಸ್ವೀಕರಿಸಿದ ತರುವಾಯ ಅದನ್ನು ನಿಯಮಿಸಲಾದ ವ್ಯಕ್ತಿಯು,-

(ಎ) ಮೃತನ ಪ್ರತಿನಿಧಿಯು ಅವನಿಗೆ ಗೊತ್ತಿದ್ದರೆ ಆ ಪ್ರತಿನಿಧಿಗೆ ಆ ಹೆಚ್ಚುವರಿ ಹಣವನ್ನು ಸಂದಾಯ ಮಾಡತಕ್ಕದ್ದು;

(ಬಿ) ಯಾರೇ ಅಂತಹ ಪ್ರತಿನಿಧಿಯು ಅವನಿಗೆ ಗೊತ್ತಿರದಿದ್ದರೆ ಮತ್ತು 10ನೇ ಪ್ರಕರಣದ ಮೇರೆಗೆ ಅಂತಹ ಹೆಚ್ಚುವರಿ ಹಣವನ್ನು ವಿಲೆ ಮಾಡಿರದಿದ್ದರೆ, ಪ್ರತಿ ವರ್ಷ ಒಂದು ನೋಟೀಸನ್ನು ನಿಯಮಿಸಲಾದ ನಮೂನೆ ಮತ್ತು ರೀತಿಯಲ್ಲಿ ನಿರಂತರ ಆರು ವರ್ಷಗಳವರೆಗೆ ಪ್ರಕಟಿಸತಕ್ಕದ್ದು ಮತ್ತು ಅಂತಹ ಕೊನೆಯ ನೋಟೀಸನ್ನು ಪ್ರಕಟಿಸಿದ ತರುವಾಯವೂ ಆರು ತಿಂಗಳ ಒಳಗಾಗಿ ಮೃತನ ಪ್ರತಿನಿಧಿಯು ಯಾವುದೇ ಹೆಚ್ಚುವರಿ ಹಣಕ್ಕೆ ಕ್ಲೇಮನ್ನು ಸಲ್ಲಿಸದಿದ್ದರೆ, ನಿಯಮಿಸಲಾದ ವ್ಯಕ್ತಿಯು, ಅಂತಹ ಹೆಚ್ಚುವರಿ ಹಣವನ್ನು ಯಾವುದೇ ಆದಾಯದೊಂದಿಗೆ ಅಥವಾ ಅದರಿಂದ ಒದಗಿಬರುವ ಸಂಚಿತ ಆದಾಯದೊಂದಿಗೆ, ಕೇಂದ್ರ ಸರ್ಕಾರದ ಜಮೆಗೆ ಠೇವಣಿ ಮಾಡತಕ್ಕದ್ದು:

ಪರಂತು, ಅಂತಹ ಠೇವಣಿಯು, ಯಾರೇ ವ್ಯಕ್ತಿಯು ಅನ್ಯಥಾ ಅದಕ್ಕೆ ಹಕ್ಕುದಾರನಾಗಿದ್ದಲ್ಲಿ ಅವನು ಅಂತಹ ಹೆಚ್ಚುವರಿ ಹಣಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಕ್ಲೇಮು ಮಾಡುವುದನ್ನು ಪ್ರತಿಷೇಧಿಸತಕ್ಕದ್ದಲ್ಲ.

**9. ಹಣವಲ್ಲದ ಇತರ ಸಾಮಾನು ಸರಂಜಾಮುಗಳ ವಿಲೆ.–** ಮೃತ ವ್ಯಕ್ತಿಯ ಎಸ್ಟೇಟಿನ ಯಾವುದೇ ಭಾಗವು ಹಣವಾಗಿ ಪರಿವರ್ತಿಸಿರದ ಸಾಮಾನು ಸರಂಜಾಮುಗಳು, ಭದ್ರತಾ ಪತ್ರಗಳು ಅಥವಾ ಇತರ ಸ್ವತ್ತನ್ನು ಒಳಗೊಂಡಿರುವಲ್ಲಿ, ಆ ಹೆಚ್ಚುವರಿ ಹಣದ ಸಂದಾಯಕ್ಕೆ ಸಂಬಂಧಿಸಿದಂತೆ 3ನೇ ಪ್ರಕರಣದ (7)ನೇ ಉಪಪ್ರಕರಣ, 4ನೇ ಪ್ರಕರಣದ (ii)ನೇ ಖಂಡ ಮತ್ತು 8ನೇ ಪ್ರಕರಣದ ಉಪಬಂಧಗಳು ನಿಯಮಿಸಬಹುದಾದುದನ್ನುಳಿದು, ಅಂತಹ ಸಾಮಾನು ಸರಂಜಾಮುಗಳು, ಭದ್ರತಾ ಪತ್ರಗಳ ಅಥವಾ ಸ್ವತ್ತಿನ ವಶಾವಣೆ, ರವಾನೆ ಅಥವಾ ವರ್ಗಾವಣೆಗೆ ಅನ್ವಯವಾಗತಕ್ಕದ್ದು ಮತ್ತು ನಿಯಮಿಸಲಾದ ವ್ಯಕ್ತಿಯು ಅದನ್ನು ಹಣವಾಗಿ ಪರಿವರ್ತಿಸಲು ಮೃತನ ಪ್ರತಿನಿಧಿಯು ಹೊಂದಿರುವಂಥವೇ ಅಧಿಕಾರಗಳನ್ನು ಹೊಂದಿರತಕ್ಕದ್ದು.

**10. ಪ್ರೊಬೇಟ್ ಮುಂತಾದವನ್ನು ಹಾಜರುಪಡಿಸದೆ ಕೆಲವು ಸ್ವತ್ತಿನ ವಿಲೆ.–** 3ನೇ ಪ್ರಕರಣ ಅಥವಾ 4ನೇ ಪ್ರಕರಣ ಅಥವಾ 8ನೇ ಪ್ರಕರಣದ ಮೇರೆಗೆ ಮೃತನ ಪ್ರತಿನಿಧಿಗೆ ವಶಾವಣೆ ಮಾಡಬಹುದಾದ ಸ್ವತ್ತು ಮತ್ತು ಸಂದಾಯವಾಗಬಹುದಾದ ಹಣ ಇವುಗಳ ಒಟ್ಟು ಮೊತ್ತ ಅಥವಾ ಮೌಲ್ಯವು ಎರಡು ಲಕ್ಷ ರೂ.ಗಳಿಗೆ ಮೀರದಿದ್ದರೆ ಮತ್ತು ನಿಯಮಿಸಲಾದ ವ್ಯಕ್ತಿಯು ತಾನು ಸೂಕ್ತವೆಂದು ಭಾವಿಸಿದರೆ, ಅದನ್ನು ಸ್ವೀಕರಿಸಲು ಅಥವಾ ಎಸ್ಟೇಟಿನ ಆಡಳಿತವನ್ನು ನಿರ್ವಹಿಸಲು ಹಕ್ಕುಳ್ಳವನೆಂದು ತನಗೆ ಕಂಡುಬರುವಂಥ ಯಾರೇ ವ್ಯಕ್ತಿಗೆ, ಅಂತಹ ವ್ಯಕ್ತಿಯು ಯಾವುದೇ ಪ್ರೊಬೇಟ್, ಆಡಳಿತ ಪತ್ರ, ಉತ್ತರಾಧಿಕಾರ ಪತ್ರ ಅಥವಾ ಹಕ್ಕಿನ ಇತರ ನಿರ್ಣಾಯಕ ಸಾಕ್ಷಿಯನ್ನು ನೀಡಬೇಕೆಂದು ಅಗತ್ಯಪಡಿಸದೆಯೇ ಅವನಿಗೆ ಅವುಗಳನ್ನು ವಶಾವಣೆ ಮಾಡತಕ್ಕದ್ದು ಅಥವಾ ಸಂದಾಯ ಮಾಡತಕ್ಕದ್ದು.

**11. ಕಮಾಂಡಿಂಗ್ ಅಧಿಕಾರಿ, ಸಮಿತಿ, ನಿಯಮಿಸಲಾದ ವ್ಯಕ್ತಿ ಮತ್ತು ಕೇಂದ್ರ ಸರ್ಕಾರ–ಇವರನ್ನು ವಿಮುಕ್ತಗೊಳಿಸುವುದು.–** ಕಮಾಂಡಿಂಗ್ ಅಧಿಕಾರಿ, ಸಮಿತಿ ಅಥವಾ ನಿಯಮಿಸಲಾದ ವ್ಯಕ್ತಿಯು 3ನೇ ಪ್ರಕರಣ, 4ನೇ ಪ್ರಕರಣ, 8ನೇ ಪ್ರಕರಣ, 9ನೇ ಪ್ರಕರಣ ಅಥವಾ 10ನೇ ಪ್ರಕರಣಗಳಿಗನುಗುಣವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಹಣದ ಸಂದಾಯ ಅಥವಾ ವಿನಿಯೋಗ ಅಥವಾ ಯಾವುದೇ ಸ್ವತ್ತಿನ ವಿನಿಯೋಗ, ವಶಾವಣೆ, ಮಾರಾಟ ಅಥವಾ ಇತರ ವಿಲೇವಾರಿಯು ಕಾನೂನು ಮಾನ್ಯವಾಗಿರತಕ್ಕದ್ದು ಮತ್ತು ಸಂದರ್ಭಾನುಸಾರ ಕಮಾಂಡಿಂಗ್ ಅಧಿಕಾರಿ, ಸಮಿತಿ ಅಥವಾ ನಿಯಮಿಸಲಾದ ವ್ಯಕ್ತಿಯು ಮತ್ತು ಕೇಂದ್ರ ಸರ್ಕಾರವು ಪೂರ್ಣವಾಗಿ ಅದರಿಂದ ವಿಮುಕ್ತರಾಗತಕ್ಕದ್ದು ಮತ್ತು ಆ ಹಣ ಅಥವಾ ಸ್ವತ್ತಿನ ಸಂಬಂಧದಲ್ಲಿ ಮುಂದಿನ ಎಲ್ಲ ಹೊಣೆಗಾರಿಕೆಯಿಂದ ವಿಮುಕ್ತರಾಗತಕ್ಕದ್ದು. ಆದರೆ, ಇದರಲ್ಲಿ ಒಳಗೊಂಡಿರುವುದು ಯಾವುದೂ ಯಾರೇ ನಿರ್ವಾಹಕ ಅಥವಾ ಆಡಳಿತಗಾರ ಅಥವಾ ಇತರ ಪ್ರತಿನಿಧಿಯ ಹಕ್ಕನ್ನು ಬಾಧಿಸತಕ್ಕದ್ದಲ್ಲ ಅಥವಾ ಯಾರಿಗೆ ಅಂಥ ಸಂದಾಯವನ್ನು ಅಥವಾ ವಶಾವಣೆಯನ್ನು ಮಾಡಲಾಗಿದೆಯೋ ಆ ಯಾರೇ ವ್ಯಕ್ತಿಯ ವಿರುದ್ಧ ಮೃತನ ಯಾರೇ ಸಾಲಿಗನ ಹಕ್ಕನ್ನು ಬಾಧಿಸತಕ್ಕದ್ದಲ್ಲ.

**12. ಕಮಾಂಡಿಂಗ್ ಅಧಿಕಾರಿ, ಸಮಿತಿ ಅಥವಾ ನಿಯಮಿಸಲಾದ ವ್ಯಕ್ತಿಯ ವಶದಲ್ಲಿನ ಆಸ್ತಿಯು ಆ ಕಮಾಂಡಿಂಗ್ ಅಧಿಕಾರಿಯ, ಸಮಿತಿಯ ಅಥವಾ ನಿಯಮಿಸಲಾದ ವ್ಯಕ್ತಿಯು ಇರುವ ಸ್ಥಳದಲ್ಲಿನ ಆಸ್ತಿ ಯಾಗದಿರುವುದು.–** 3ನೇ ಪ್ರಕರಣ, 4ನೇ ಪ್ರಕರಣ ಅಥವಾ 7ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಕಮಾಂಡಿಂಗ್ ಅಧಿಕಾರಿಯ ಅಥವಾ ಸಮಿತಿಯ ಅಥವಾ ನಿಯಮಿಸಲಾದ ವ್ಯಕ್ತಿಯ ವಶಕ್ಕೆ ಬರುವ ಯಾವುದೇ ಸ್ವತ್ತನ್ನು, ಕಮಾಂಡಿಂಗ್ ಅಧಿಕಾರಿ ಅಥವಾ ಸಮಿತಿ ಅಥವಾ ನಿಯಮಿಸಲಾದ ವ್ಯಕ್ತಿಯು ಇರುವ ಸ್ಥಳದ ಕಾರಣಮಾತ್ರದಿಂದಾಗಿ ಆ ಸ್ಥಳದಲ್ಲಿನ ಸ್ವತ್ತು ಅಥವಾ ಜಮಾವಣೆ ಎಂದು ಭಾವಿಸತಕ್ಕದ್ದಲ್ಲ ಮತ್ತು ಆ ಕಾರಣದಿಂದಾಗಿ ಆ ಸ್ವತ್ತಿನ ಸ ಂಬಂಧದಲ್ಲಿ ಆ ಸ್ಥಳದ ಪ್ರಾತಿನಿಧ್ಯವನ್ನು ತೆಗೆದುಕೊಳ್ಳುವ ಅವಶ್ಯಕತೆಯಿರತಕ್ಕದ್ದಲ್ಲ.

**13. ಪ್ರತಿನಿಧಿಯ ಹಕ್ಕುಗಳನ್ನು ಉಳಿಸುವುದು.–** ಕಮಾಂಡಿಂಗ್ ಅಧಿಕಾರಿಯು ಅಥವಾ ಸಮಿತಿಯು ಯಾರೇ ಮೃತ ವ್ಯಕ್ತಿಯ ಹೆಚ್ಚುವರಿ ಸ್ವತ್ತನ್ನು 3ನೇ ಪ್ರಕರಣದ (7)ನೇ ಉಪ ಪ್ರಕರಣ ಅಥವಾ 4ನೇ ಪ್ರಕರಣದ (ii)ನೇ ಖಂಡದ ಮೇರೆಗೆ ನಿಯಮಿಸಲಾದ ವ್ಯಕ್ತಿಗೆ ಸಂದಾಯ ಮಾಡಿದ ತರುವಾಯ, ಮೃತನ ಯಾರೇ ಪ್ರತಿನಿಧಿ ಅಥವಾ ಯಾರೇ ಪ್ರಧಾನ ಆಡಳಿತಗಾರ, ಸಂದರ್ಭಾನುಸಾರ, ಕಮಾಂಡಿಂಗ್ ಅಧಿಕಾರಿ

ಅಥವಾ ಸಮಿತಿಯು ಸಂಗ್ರಹಿಸಿರದ ಮತ್ತು ಮೇಲೆ ತಿಳಿಸಿದ ಹೆಚ್ಚುವರಿಯ ಭಾಗವಾಗಿರದ ಮೃತನ ಯಾವುದೇ ಸ್ವತ್ತಿನ ಸಂಬಂಧದಲ್ಲಿ 3 ಮತ್ತು 4ನೇ ಪ್ರಕರಣಗಳನ್ನು ಅಧಿನಿಯಮಿತಿಗೊಳಿಸಿರದಿದ್ದರೆ ಹೇಗೋ ಹಾಗೆ ಅದೇ ಹಕ್ಕು ಮತ್ತು ಕರ್ತವ್ಯಗಳನ್ನು ಹೊಂದಿರತಕ್ಕದ್ದು.

**14. ಅಸ್ವಸ್ಥಚಿತ್ತ ವ್ಯಕ್ತಿಗಳಿಗೆ ಅಥವಾ ಸೇನೆಯ ಸಕ್ರಿಯ ಸೇವೆಯಲ್ಲಿರುವಾಗಲೇ ಕಾಣೆಯಾದವರೆಂದು ವರದಿಯಾದ ವ್ಯಕ್ತಿಗಳಿಗೆ 3 ರಿಂದ 13ರ ವರೆಗಿನ ಪ್ರಕರಣಗಳ ಅನ್ವಯ.**– 3 ರಿಂದ 13ರ ವರೆಗಿನ ಪ್ರಕರಣಗಳ ಉಪಬಂಧಗಳನ್ನು, ಅವುಗಳನ್ನು ಅನ್ವಯಿಸಲು ಸಾಧ್ಯವಿರುವಷ್ಟು ಮಟ್ಟಿಗೆ, ಸಂದರ್ಭಾನುಸಾರ, ಸೇನಾ ಅಧಿನಿಯಮ, 1950 ಅಥವಾ ವಾಯು ಸೇನಾ ಅಧಿನಿಯಮ, 1950ರ ಮೇರೆಗೆ ಒಳಪಟ್ಟಿರುವ, ಮಾನಸಿಕ ಆರೋಗ್ಯ ಅಧಿನಿಯಮ, 1987 (1987ರ 14) ರಲ್ಲಿ ಏನೇ ಇದ್ದರೂ ಅವನು ಅಸ್ವಸ್ಥಚಿತ್ತನೆಂದು ನಿಯಮಿಸಲಾದ ರೀತಿಯಲ್ಲಿ ಖಚಿತಪಡಿಸಿಕೊಂಡಿರುವಲ್ಲಿ ಅಥವಾ ಸಕ್ರಿಯ ಸೇವೆಯಲ್ಲಿರುವಾಗ ಅವನು ಕಾಣೆಯಾಗಿದ್ದಾನೆಂದು ಅಧಿಕೃತವಾಗಿ ವರದಿಯಾಗಿರುವಲ್ಲಿ, ಅಸ್ವಸ್ಥಚಿತ್ತನೆಂದು ಖಚಿತಪಡಿಸಿಕೊಂಡ ಆ ದಿನದಂದು ಅವನು ಮರಣ ಹೊಂದಿದ್ದರೆ ಅಥವಾ ಸಂದರ್ಭಾನುಸಾರ, ಅಧಿಕೃತವಾಗಿ ಆ ದಿನದಂದು ಕಾಣೆಯಾಗಿದ್ದಾನೆಂದು ವರದಿಯಾಗಿದ್ದರೆ ಹೇಗೋ ಹಾಗೆ ಅಂತಹ ವ್ಯಕ್ತಿಯ ಸಂಬಂಧದಲ್ಲಿ, ಸಹ ಅನ್ವಯಿಸತಕ್ಕದ್ದು:

ಪರಂತು, ಕಾಣೆಯಾಗಿದ್ದಾನೆಂದು ಹಾಗೆ ವರದಿಯಾದ ವ್ಯಕ್ತಿಯ ಸಂದರ್ಭದಲ್ಲಿ, ಅವನು ಸತ್ತಿದ್ದಾನೆಂದು ಅಧಿಕೃತವಾಗಿ ಭಾವಿಸುವಂಥ ಸಮಯದವರೆಗೆ 3ನೇ ಪ್ರಕರಣದ (2) ರಿಂದ (6)ನೇ ಉಪ ಪ್ರಕರಣಗಳ ಮೇರೆಗೆ ಅಥವಾ 4ನೇ ಪ್ರಕರಣ ಅಥವಾ 7ನೇ ಪ್ರಕರಣದ ಮೇರೆಗೆ ಯಾವುದೇ ಕ್ರಮ ಕೈಗೊಳ್ಳತಕ್ಕದ್ದಲ್ಲ.

**15. ಕೆಲವು ನಿರ್ದಿಷ್ಟ ಪ್ರಕರಣಗಳಲ್ಲಿ ಹೊಂದಾಣಿಕೆ ಸ್ಥಾಯಿ ಸಮಿತಿಯ ನೇಮಕ.**– ಒಬ್ಬ ಅಧಿಕಾರಿಯು ಮರಣ ಹೊಂದಿದಾಗ ಅಥವಾ ಸೇವೆಯನ್ನು ತ್ಯಜಿಸಿಹೋದಾಗ ಅಥವಾ ನಿಯಮಿಸಲಾದ ರೀತಿಯಲ್ಲಿ ಅಸ್ವಸ್ಥಚಿತ್ತನೆಂಬುದಾಗಿ ಖಚಿತಪಡಿಸಿಕೊಂಡಾಗ ಅಥವಾ ಸಕ್ರಿಯ ಸೇವೆಯಲ್ಲಿರುವಾಗ ಕಾಣೆಯಾಗಿದ್ದಾನೆಂದು ಅಧಿಕೃತವಾಗಿ ವರದಿಯಾಗಿರುವಾಗ, ಈ ಅಧಿನಿಯಮದ ಪೂರ್ವೋಕ್ತ ಉಪಬಂಧಗಳಲ್ಲಿ ಸಮಿತಿಗೆ ಮಾಡಿದ ಉಲ್ಲೇಖಗಳನ್ನು, ನಿಯಮಿಸಲಾದ ರೀತಿಯಲ್ಲಿ ಈ ಕುರಿತು ರಚನೆಯಾದ ಯಾವುದೇ ಹೊಂದಾಣಿಕೆ ಸ್ಥಾಯಿ ಸಮಿತಿಗೆ ಮಾಡಿದ ಉಲ್ಲೇಖಗಳೆಂಬುದಾಗಿ ಅರ್ಥೈಸತಕ್ಕದ್ದು ಮತ್ತು ಅಂಥ ಸ್ಥಾಯಿ ಸಮಿತಿಯು ಮಾತ್ರ ಈ ಅಧಿನಿಯಮದ ಮೇರೆಗೆ ಸಮಿತಿಯ ಎಲ್ಲಾ ಪ್ರಕಾರ್ಯಗಳನ್ನು ನಿರ್ವಹಿಸಲು ಹಕ್ಕುಳ್ಳ ಸಮಿತಿಯಾಗಿರತಕ್ಕದ್ದು.

**16. ನಿಯಮ ರಚನಾಧಿಕಾರ.**– (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಪ್ರತಿಕೂಲವಾಗದಂತೆ ಅಂಥ ನಿಯಮಗಳು–

(ಎ) ಮೃತನಿಗೆ ಅಥವಾ ಸೇವೆಯನ್ನು ತ್ಯಜಿಸಿ ಹೋದವನಿಗೆ ಸೇರಿದ ಯಾವುದೇ ಸ್ವತ್ತನ್ನು ಯಾವ ರೀತಿ ಪಡೆಯಬೇಕು ಅಥವಾ ಸಂಗ್ರಹಿಸಬೇಕು ಮತ್ತು ಶಿಬಿರದಲ್ಲಿನ ಅಥವಾ ಕ್ವಾರ್ಟರ್ಸ್‌ನಲ್ಲಿನ ಅವನ ರೆಜಿಮೆಂಟಿನ ಮತ್ತು ಇತರ ಋಣಗಳನ್ನು ಯಾವ ರೀತಿ ಸಂದಾಯ ಮಾಡಬೇಕು ಎಂಬುದನ್ನು ನಿಯಮಿಸಬಹುದು;

(ಬಿ) ಯಾರೇ ಮೃತನ ಅಂತ್ಯಕ್ರಿಯೆಯ ವೆಚ್ಚಗಳ ಸಂದಾಯಕ್ಕೆ ಉಪಬಂಧ ಕಲ್ಪಿಸಬಹುದು;

(ಸಿ) ಈ ಅಧಿನಿಯಮದ ಮೇರೆಗೆ ಹೊಂದಾಣಿಕೆ ಸಮಿತಿ ಅಥವಾ ಯಾವುದೇ ಹೊಂದಾಣಿಕೆ ಸ್ಥಾಯಿ ಸಮಿತಿಯನ್ನು ರಚಿಸಲು ಉಪಬಂಧ ಕಲ್ಪಿಸಬಹುದು;

(ಡಿ) ಈ ಅಧಿನಿಯಮದ ಉದ್ದೇಶಗಳಿಗಾಗಿ ನಿಯಮಿಸಲಾದ ವ್ಯಕ್ತಿ ಎಂದು ಪರಿಗಣಿಸಲಾದ ವ್ಯಕ್ತಿಯನ್ನು ನಿರ್ದಿಷ್ಟಪಡಿಸಬಹುದು;

(ಇ) ಯಾರೇ ಮೃತನ ಎಸ್ಟೇಟನ್ನು ಯಾವ ಸನ್ನಿವೇಶಗಳಲ್ಲಿ ಆಡಳಿತಗಾರನಿಗೆ ವಹಿಸಿಕೊಡಬೇಕೆಂಬುದನ್ನು ನಿಯಮಿಸಬಹುದು;

(ಎಫ್) 8ನೇ ಪ್ರಕರಣದ ಮೇರೆಗೆ ಒಂದು ನೋಟೀಸನ್ನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಪ್ರಕಟಿಸಬೇಕೆಂಬುದನ್ನು ನಿಯಮಿಸಬಹುದು;

(ಜಿ) ಯಾರೇ ವ್ಯಕ್ತಿಯನ್ನು ಯಾವ ವಿಧಾನದ ಮೂಲಕ ಅಸ್ವಸ್ಥಚಿತ್ತ ವ್ಯಕ್ತಿ ಎಂಬುದಾಗಿ ಖಚಿತಪಡಿಸಿಕೊಳ್ಳಬೇಕೆಂಬುದನ್ನು ನಿಯಮಿಸಬಹುದು.

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇರಿಸಲಾದ ಅಧಿವೇಶನದ ಅಥವಾ ಅನುಕ್ರಮ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯಗೊಳ್ಳುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

* * *